# ಹಿಂದೆಯೂ ಹೀಗೆಯೇ ಮಾಡಿದ್ದಿ

ಸ್ವಾಮಿ ಜಗದಾತ್ಮಾನಂದ

**ಆಧ್ಯಾತ್ಮಿಕ ಸಾಧನೆಗೆ ಅತ್ಯಗತ್ಯವಾದ ದೃಢಸಂಕಲ್ಪದ ಮಹತ್ವವನ್ನು ತಿಳಿಸುವ ಈ ಪ್ರಸಂಗವನ್ನು ಮನಮುಟ್ಟುವಂತೆ ನಿರೂಪಿಸಿರುವ ಸ್ವಾಮಿ ಜಗದಾತ್ಮಾನಂದಜಿಯವರು ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿರುವರು.**

ಗೌತಮ ಬುದ್ಧನಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು ಪೂರ್ಣ ಧ್ಯಾನಜೀವನ ನಡೆಯಿಸಲು ರಾಜನೊಬ್ಬ ಹಂಬಲಿಸಿದ. ಬುದ್ಧಗುರುವಿನ ಬಳಿಸಾರಿ ದೀಕ್ಷೆಯನ್ನೂ ಪಡೆದು ವಿಹಾರವಾಸಿಯಾದ. ವಯಸ್ಸಿನಲ್ಲಿ, ಲೌಕಿಕ ಜ್ಞಾನದಲ್ಲಿ ಆತ ಹಿರಿಯ ನಾಗಿದ್ದರೂ ಆಧ್ಯಾತ್ಮಿಕ ವಿಷಯದಲ್ಲಿ ಕಿರಿಯ ಸಂನ್ಯಾಸಿಗಳಿಗೂ ಕಿರಿಯ. ಆತ ಜ್ಯೂನಿಯರ್ ಮೋಸ್ಟ್. ಸಂನ್ಯಾಸದೀಕ್ಷೆಯನ್ನೂ ಪಡೆದ. ಮೂವತ್ತು ನಲ್ವತ್ತು ವರ್ಷಗಳ ಕಾಲ ಶ್ರದ್ಧೆ ಹಾಗೂ ನಿಷ್ಠೆಯಿಂದ ಧ್ಯಾನಮಾಡಿದವರು ಅಲ್ಲಿದ್ದರು. ರಾಜನಾದರೂ ಇಂದೇ ಸಂನ್ಯಾಸ ದೀಕ್ಷೆ ಪಡೆದ ವ್ಯಕ್ತಿ. ಕಲ್ಲಿನ ಬೆಂಚೊಂದರ ಮೇಲೆ ಹಾಸಿದ ಹುಲ್ಲು ಚಾಪೆಯ ಮೇಲೆ ಆತ ಮಲಗಿಕೊಳ್ಳಬೇಕಾಗಿತ್ತು.

ರಾಜನು ಯತ್ನಿಸಿದರೂ ನಿದ್ರೆ ಬರಲೊಲ್ಲದು. ಅವನ ಕಷ್ಟವನ್ನು ಅರಿತುಕೊಳ್ಳುವುದು ಎಲ್ಲರಿಗೂ ಸುಲಭವೆ. ಅಂಥ ಒರಟು ಜಾಗ ದಲ್ಲಿ ಮಲಗಿದವನೇ ಅವನು? ಸೊಳ್ಳೆಗಳ ಕಾಟ ಬೇರೆ. ಯುದ್ಧ ಕಲೆಯಲ್ಲಿ ನಿಪುಣನಾದರೂ ಸೊಳ್ಳೆಗಳೊಡನೆ ಕಾದಾಡಲು ಅವನು ತರಬೇತಿ ಪಡೆದವನಲ್ಲ. ಆ ಒರಟು ಹಾಸಿನಮೇಲೆ ಹೊರಳುತ್ತ ನಿದ್ರೆಯಿಲ್ಲದೇ ಚಿಂತಿಸುತ್ತ ಕಾಲಕಳೆದ.

ಮಧ್ಯರಾತ್ರಿಯ ಹೊತ್ತು. ಜಗತ್ತು ಮಲಗಿ ನಿದ್ರಿಸುತ್ತಿದೆ. ಆದರೆ ನಿದ್ರೆ ಬಾರದ ಈತನ ಮನಸ್ಸಿನ ಆಳದಿಂದ ಒಂದು ಯೋಚನೆ ಹೊರಹೊಮ್ಮಿತು : ನಾನು ಮಾಡಿದ್ದಾದರೂ ಏನು? ಇದು ಮೂರ್ಖತನದ ಕೆಲಸವಲ್ಲವೇ? ಅರಮನೆಯ ಸುಪ್ಪತ್ತಿಗೆಯ ಮೇಲೆ ಮಲಗಿರಬೇಕಾದವನು ನಾನು. ನನಗೆ ಯಾವ ಕೊರತೆಯೂ ಇರಲಿಲ್ಲ. ಇಲ್ಲಿ ಬಂದು ನಿದ್ರಾಹೀನನಾಗಿ ಈ ಸಂಕಟವನ್ನೇಕೆ ಅನುಭವಿಸಬೇಕು? ಇದು ಅರ್ಥವಿಲ್ಲದ ಕೆಲಸ. ನಾಳೆ ಬೆಳಗಾದೊಡನೆ ನಾನು ಮಾಡುವ ಪ್ರಥಮ ಕಾರ್ಯವೇ ಬುದ್ಧಗುರುವನ್ನು ಕೇಳುವುದು; ಕ್ಷಮಿಸಿ, ಈ ಅನವಶ್ಯಕ ಕಷ್ಟ ತೊಂದರೆಗಳನ್ನು ನಾನು ಸಹಿಸಲಾರೆ. ನಾನು ಅರಮನೆಗೆ ಹಿಂದಿರುಗುತ್ತೇನೆ.

ಅದೇ ಹೊತ್ತಿಗೆ ಗೌತಮಬುದ್ಧ ಹೊರಬಂದು ನವೀನ ಸಂನ್ಯಾಸಿಯನ್ನು ಕಂಡು "ಬೆಳಗಿನ ತನಕ ಏಕೆ ಕಾಯುವೆ? ಸಂನ್ಯಾಸವನ್ನು ತ್ಯಜಿಸುವುದಿದ್ದರೆ ಈಗಲೇ ಹೋಗಬಹುದಲ್ಲವೇ? ಇಡಿಯ ರಾತ್ರಿ ಚಿಂತಿಸುತ್ತ ಕುಳಿತಿರುವುದೇ?" ಎಂದ.

ರಾಜನಿಗೆ ಬಹಳ ಆಶ್ಚರ್ಯ. ಆತನು ತನ್ನ ಮನಸ್ಸಿನ ಭಾವನೆಗಳನ್ನು ಯಾರಿಗೂ ಹೇಳಿರಲಿಲ್ಲ. ಹತ್ತಿರದಲ್ಲಿ ಬೇರೆ ಯಾರೂ ಇರ ಲಿಲ್ಲ. "ಓಹ್, ಹೀಗೇ ಸುಮ್ಮನೆ ಒಂದು ಯೋಚನೆ ಮನಸ್ಸಿನಲ್ಲಿ ಸುಳಿದುಹೋಯಿತು. ನಿಮಗಾದರೂ ಇದು ಹೇಗೆ ತಿಳಿಯಿತು?" ಎಂದು ಕೇಳಿದ.

ಗೌತಮಬುದ್ಧ ಉಸುರಿದ : "ನಿನ್ನ ಯೋಚನೆಗಳೆಲ್ಲ ಮನಸ್ಸಿನಿಂದ ದೂರವಾದರೆ, ಎಂದರೆ ಮನಸ್ಸು ಶುದ್ಧವಾದರೆ ನೀನು ಇತರರ ಯೋಚನೆಗಳನ್ನೂ ಬೇಗನೇ ಗುರುತಿಸಬಹುದು. ಏಕೆಂದರೆ ಯೋಚನೆಗಳು ವಸ್ತುಗಳಂತೆಯೇ ನಿಜವಾದವುಗಳು, ಆದರೆ ಸಾಮಾನ್ಯ ದೃಷ್ಟಿಗೆ ಗೋಚರಿಸದ ಸೂಕ್ಷ್ಮವಸ್ತುಗಳು. ನೀನು ನಿನ್ನ ಯೋಚನೆಗಳಲ್ಲೇ ಮುಳುಗಿರುವುದರಿಂದ ಇತರರ ಯೋಚನೆಗಳನ್ನು ಗುರುತಿಸುವುದೆಂತು? ನಿನ್ನ ಮನಸ್ಸನ್ನೆಲ್ಲ ನಿನ್ನ ಯೋಚನೆಗಳೇ ಮುತ್ತಿರುವಾಗ ಇತರರ ಯೋಚನೆಗಳಿಗೆ ಅವಕಾಶ ಎಲ್ಲಿದೆ? ಇರಲಿ. ನೀನು ದಯವಿಟ್ಟು ಅರಮನೆಗೆ ಹಿಂದಿರುಗಿ ಹೋಗು."

"ನಾನು ಹೋಗಲಾರೆ. ನಿಮ್ಮಂಥ ಸದ್ಗುರುವನ್ನು ಬಿಡಲಾರೆ. ಬಿಟ್ಟು ದೂರ ಸರಿಯಲಾರೆ."

ಬುದ್ಧ ತಿರುಗಿ ನುಡಿದ : "ಆದರೆ ನನ್ನ ಸೂಚನೆಯನ್ನು ತಿರುಗಿ ಉಚ್ಚರಿಸುತ್ತೇನೆ. ನೀನು ತಿರುತಿರುಗಿ ಹೋಗುವ ಯೋಚನೆ ಮಾಡುತ್ತಿ. ಆದುದರಿಂದ ಹೊರಟುಹೋಗುವುದೇ ಲೇಸು. ಒಂದು ವಿಚಾರವನ್ನು ನಾನು ನಿನಗೆ ಮನವರಿಕೆ ಮಾಡಿಕೊಡಬೇಕಾಗಿದೆ. ನೀನು ನಿನ್ನ ಹಿಂದಿನ ಜೀವನದಲ್ಲಿ ಸಂನ್ಯಾಸವನ್ನು ಸ್ವೀಕರಿಸಿದ್ದಿ. ಮಾತ್ರವಲ್ಲ ಸಂನ್ಯಾಸಕ್ಕೆ ಸಂನ್ಯಾಸಕೊಟ್ಟಿದ್ದಿ. ಇದೇ ಕಷ್ಟಸಂಕಟ ಅಂತರ್‌ದ್ವಂದ್ವವನ್ನು ಅನುಭವಿಸಿದ್ದಿ. ಇದೇ ಚಡಪಡಿಕೆಯನ್ನೇ ಅನುಭವಿಸಿದ್ದಿ. ಈಗಲೂ ಅದೇ ಸ್ಥಿತಿ ಮರುಕಳಿಸುತ್ತಿದೆ. ಅದೇ ಮತ್ತೆ ಮತ್ತೆ ಕಾಣಿಸಿಕೊಂಡೀತು!"

ಬುದ್ಧನ ಈ ವಾಕ್ಯಗಳನ್ನು ಕೇಳುತ್ತಿದ್ದಂತೆಯೆ ಆ ರಾಜ-ಸಂನ್ಯಾಸಿಯ ಮನಸ್ಸಿನ ಆಳದಿಂದ ಪುರಾತನ ಸಂಸ್ಕಾರಗಳ ಸ್ಮರಣೆ ಎಚ್ಚೆತ್ತುಕೊಂಡಿತು. ಹೌದು, ಹೀಗೆ ಹೀಗೆ ನಡೆಯಿತು ಎಂಬುದು ಅವನ ಮನಸ್ಸಿನ ಕಣ್ಣಿಗೆ ಸ್ಪಷ್ಟವಾಗಿ ಗೋಚರವಾಯಿತು. ಪ್ರತಿಯೊಂದು ಹಿಂದಿನ ಸನ್ನಿವೇಶಗಳೂ ಸ್ಪಷ್ಟವಾದವು. ಗುರುವೇನೋ ಬೇರೊಬ್ಬರು, ಸಂನ್ಯಾಸಿಮಠ ಬೇರೆ, ಖಂಡಿತವಾಗಿಯೂ ಸೊಳ್ಳೆಗಳು ಬೇರೆಯವೇ ಆಗಿದ್ದವು—ಆದರೆ ತಾನು ಮಾತ್ರ ಅದೇ ಹಳೆಯ ವ್ಯಕ್ತಿ—ತನ್ನ ಸಮಸ್ಯೆ ಅದೇ ಹಳೆಯ ಸಮಸ್ಯೆ.

ಈಗ ರಾಜ ತನಗೆ ತಾನೇ ಹೇಳಿಕೊಂಡ: "ಓ ಸಾಕು ! ಸಾಕು! ನಾನು ಇನ್ನು ಹಿಂದಿರುಗುವುದಿಲ್ಲ. ಇಲ್ಲೇ ದೃಢವಾಗಿ ನೆಲೆ ನಿಲ್ಲುತ್ತೇನೆ. ಏನೇ ಆಗಲಿ ಸಾಧನೆಯಲ್ಲಿ ಮುಳುಗುತ್ತೇನೆ. ಇಂಥ ಸ್ಥಾನಗಳಲ್ಲಿ ಹಲವು ಬಾರಿ ನಾನು ವಾಸಿಸಿದ್ದೆ. ಆದರೆ ಪಡೆಯ ಬೇಕೆಂಬುದನ್ನು ಪಡೆಯಲಿಲ್ಲ. ಆದುದರಿಂದ ಈ ಜೀವನವನ್ನು ಇನ್ನು ರಾಜ್ಯ ಸುಖದಾಸೆಗಳಿಗಾಗಿ ಮುಡಿಪಾಗಿಡಲಾರೆ. ಅಧ್ಯಾತ್ಮವೇ ನನಗೆ ಬೇಕು." ಈ ರೀತಿ ನಿಶ್ಚಯಿಸಿ ಅವನು ದೃಢನಿಷ್ಠೆಯಿಂದ ದೀರ್ಘಕಾಲ ಧ್ಯಾನ ಸಾಧನೆ ಮಾಡಿದ. ಸಿದ್ಧಿಯನ್ನೂ ಪಡೆದ.

**ಸ ತು ದೀರ್ಘಕಾಲನೈರಂತರ್ಯಸತ್ಕಾರಾಸೇವಿತೋ ದೃಢಭೂಮಿಃ**

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅರೆಬರೆ ಮನಸ್ಸಿನ ಕೆಲಸ ಆಗದು. ದೃಢಸಂಕಲ್ಪದಿಂದ ನಿಷ್ಠೆಯಿಂದ ನಿರಂತರ ಸಾಧನಶೀಲನಾಗಿರಬೇಕು. ❋